ಇದಲ್ಲದೇ ೪೨ (ನಲವತ್ತೆರಡು) ಮಂದಿ ದಿನಗೂಲಿ ನೌಕರರುಗಳನ್ನು ಅಂದಿನ ವ್ಯವಸ್ಥಾಪಕ ನಿರ್ದೇಶಕರು ಅವರುಗಳ ಸೇವೆ ಅವಶ್ಯವಿಲ್ಲವೆಂದು ಮನಗಂಡಿರುವುದರಿಂದ ದಿನಾಂಕ ೧೨ನೇ ಅಕ್ಟೋಬರ್ ೧೯೮೭ ರಿಂದ ಪಡಾ ಮಾಡಲಾಗಿದೆ.

ಶ್ರೀಯುತ/ಶ್ರೀಮತಿಯರಾದ

೧	ಹೆಚ್. ಆರ್. ಕೃಷ್ಣೇಗೌಡ	೨೨	ಹೆಚ್. ಜಯಮ್ಮ
೨	ಬಿ. ವಿ. ಬಸವರಾಜ್	೨೩	ಲಕ್ಷ್ಮಣ ಕುಂಶಿ
೩	ಎನ್. ಹೆಚ್. ಕುಮಾರ್	೨೪	ಬಿ. ಮಂಚೇಗೌಡ
೪	ರಾಮಚಂದ್ರ	೨೫	ಎಂ. ವಿ. ರಂಗಸ್ವಾಮಿ
೫	ಸಂಪತ್ ಕುಮಾರ್	೨೬	ಕೆ. ಡಿ. ಜಗದೀಶ್
೬	ಬಿ. ರಂಗಸ್ವಾಮಿ	೨೭	ಪುಟ್ಟತಾಯಮ್ಮ
೭	ಬಿ. ಆರ್. ಹರೀಶ್ ಕುಮಾರ್	೨೮	ಆಣ್ಣೇಗೌಡ
೮	ಬಿ. ಮಂಜುನಾಥ್	೨೯	ವೀರಭದ್ರಯ್ಯ
೯	ಪುಟಾಣಿ	೩೦	ಶಿವಸ್ವಾಮಿ
೧೦	ಇಂದಿರಮ್ಮ	೩೧	ಜಯರಾಮ್
೧೧	ಹೊನ್ನೇಗೌಡ	೩೨	ಫಣಿಯಾಚಾರ್
೧೨	ಬೆಟ್ಟಮ್ಮ	೩೩	ಮಿರ್ಜಾವೀರ್‌ದೊಸ್ ಆಲಿ
೧೩	ಅರುಣ	೩೪	ಮಿರ್ಜಾ ಅಮಾನತ್ ಆಲಿ
೧೪	ಹೆಚ್. ಎ. ರಮೇಶ್	೩೫	ಅಬ್ದುಲ್ ಗಾಫರ್
೧೫	ಹೆಚ್. ಎಂ. ನಾಗೇಗೌಡ	೩೬	ಬಿ. ನಾಗೇಶ್
೧೬	ಬಿ. ಟಿ. ನಿಂಗರಾಜು	೩೭	ಮಂಜುನಾಥ್
೧೭	ಕೆ. ರಂಗಸ್ವಾಮಿ	೩೮	ಮಲ್ಲಶೆಟ್ಟಿ
೧೮	ಹೆಚ್. ಕುಮಾರ್	೩೯	ಬಿ. ಕೆ. ರಮೇಶ್
೧೯	ಹನುಮೇಗೌಡ	೪೦	ಈಶ್ವರಪ್ಪ
೨೦	ಎನ್. ಕೆ. ಶಿವಸ್ವಾಮಿ	೪೧	ಬಿ. ಇ. ಶಿವಯ್ಯ
೨೧	ಜಯಮ್ಮ	೪೨	ಮುರುಗೇಶ್

ಸುಳ್ಯ ಮಂಡಲ ಪಂಚಾಯತಿಯಲ್ಲಿ ಹಣ ದುರುಪಯೋಗ

೯೦೦(೧೬೬೮) ಶ್ರೀ ಕೆ. ಕುಶಾಲ (ಸುಳ್ಯ). —ಪಾನ್ಯ ಗ್ರಾಮೀಣ ಪಂಚಾಯತಿ ರಾಜ್ಯ ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ : —

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮಂಡಲ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ನೀಡುವ ಶೇ. ೨೦ ರ ಅನುದಾನದಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರೀತಿ ದುರುಪಯೋಗವಾಗಿರುವ ಹಣದ ಮೊತ್ತವೆಷ್ಟು?

ಇ) ಈ ರೀತಿ ದುರುಪಯೋಗ ಮಾಡಿದವರ ವಿರುದ್ಧ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್, ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬಂಗಾರಪೇಟೆ ತಾಲ್ಲೂಕಿನಲ್ಲಿ ಹೆಚ್ಚು ಪಶುವೈದ್ಯ ಆಸ್ಪತ್ರೆಗಳನ್ನು ಸ್ಥಾಪಿಸುವ ಬಗ್ಗೆ

೯೦೧(೧೪೫೩) ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ).—ಮಾನ್ಯ ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಪಶುವೈದ್ಯ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಆ) ಈ ತಾಲ್ಲೂಕಿನಲ್ಲಿ ಅಗತ್ಯಕ್ಕಿಂತ ಕಡಿಮೆ ಪಶುವೈದ್ಯ ಆಸ್ಪತ್ರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅಗತ್ಯವಿರುವಷ್ಟು ಸಂಖ್ಯೆಯಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಸಚಿವರು).

ಅ) ಓ.

ಆ) ಬಂದಿದೆ.

ಇ) ಹೌದು.

ಈ) ಉದ್ಭವಿಸುವುದಿಲ್ಲ.

ಚನ್ನಪಟ್ಟಣದ ಶ್ರೀ ಕುಂವೆಂಪು ಕಾಲೇಜಿನವರು ಹೆಚ್ಚು ಭೂಮಿಯನ್ನು ಒತ್ತುವರಿ ಮಾಡಿರುವುದು

೯೦೨(೧೪೫೭) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅರಣ್ಯ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಜಮೀನು ಒತ್ತುವರಿ ಕಾನೂನು ಬಾಹಿರವೇ?

ಆ) ಚನ್ನಪಟ್ಟಣದ ಶ್ರೀ ಕುವೆಂಪು ಕಾಲೇಜಿಗೆ ನೀಡಿದ್ದ ಅರಣ್ಯ ಭೂಮಿಯು ವಿಸ್ತೀರ್ಣವೆಷ್ಟು?

ಇ) ಈ ಮಂಜೂರಾತಿ ಅಲ್ಲದೇ ಕಾಲೇಜ್ ಆಡಳಿತ ಮಂಡಳಿ ಹೆಚ್ಚು ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಪ್ರಕರಣದ ಬಗ್ಗೆ ಅರಣ್ಯ ಇಲಾಖೆಯು ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಸಚಿವರು).—

ಅ) ಹೌದು.

ಆ) ೧೦ ಹೆಕ್ಟೇರ್.

ಇ) ಗಮನಕ್ಕೆ ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.